

# ನರ್ಗಿಸ್-ಉದಯ್ ಮತ್ತೆ ಜೋಡಿ

ಬಿ–ಟೌನಿನ ಪ್ರಣಯ ಪಕ್ಷಿಗಳ ನಡುವೆ ಮನಸ್ತಾಪ ಉಂಟಾಗಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಹೀಗೆ ಬಿರುಕು ಕಾಣಿಸಿಕೊಂಡ ಬಳಿಕ ಮತ್ತೆ ತೇಪೆ ಹಾಕಿದ ದೃಷ್ಟಾಂತಗಳೂ ಇವೆ. ಆದರೆ ಮರುಜೋಡಣೆಯ ಕಾಲಮಿತಿ ಮಾತ್ರ ಸುದೀರ್ಘ. ಅದಕ್ಕೊಂದು ಅಪವಾದ ನರ್ಗಿಸ್ ಫಖ್ರಿ ಹಾಗೂ ಉದಯ್ ಚೋಪ್ರಾ.

ಅಲ್ಲಿ ಇಲ್ಲಿ ಸುತ್ತಾಡಿ ಗುಲ್ಲೆಬ್ಬಿಸಿ ಬಳಿಕ ಪರಸ್ಪರ ಬೆನ್ನು ತಿರುಗಿಸಿಕೊಂಡು ನಡೆದು ಬಹು ದಿನಗಳೇನೂ ಆಗಿಲ್ಲ. ಆಗಲೇ ಈ ಜೋಡಿ ಒಂದಾಗಿರುವ ಸುದ್ದಿ ಬಂದಿದೆ. ಒಬ್ಬರನ್ನೊಬ್ಬರು ಬಿಟ್ಟು ಇರಲು ಆಗದೆ ಇಬ್ಬರೂ ಅದೇ ಹಾದಿಗೆ ಮರಳಿದ್ದಾರೆ ಎನ್ನಲಾಗುತ್ತಿದೆ. ಹೀಗೆಂದು ಗುಮಾನಿ ಹರಡಲು ಕಾರಣ ಅಮೆರಿಕಾ ಪ್ರವಾಸ.

ಉದಯ್ ಚೋಪ್ರಾ ಸದ್ಯ ಅಮೆರಿಕದಲ್ಲಿ ವಾಸ್ತವ್ಯ ಹೂಡಿದ್ದಾರೆ. ಇತ್ತ ವಿರಹಿ ಫಖ್ರಿಗೆ ಅವರನ್ನು ಬಿಟ್ಟಿರಲಾಗದೆ ಅಮೆರಿಕದ ವಿಮಾನ ಹತ್ತಿದ್ದಾರಂತೆ. ಇದರರ್ಥ ಇಬ್ಬರೂ ಪುನಃ ಒಂದಾಗುತ್ತಿದ್ದಾರೆ ಎನ್ನುವುದು ಬಿ–ಟೌನ್ ಪಂಡಿತರ ಲೆಕ್ಕಾಚಾರ. ವೃತ್ತಿ ಬದುಕಿನ ಮೇಲೆ ಗಮನ ಹರಿಸುವ ಸಲುವಾಗಿ ಪ್ರೀತಿಯನ್ನು ಕೆಲ ಕಾಲ ಅಮಾನತ್ತಿನಲ್ಲಿಡಲು ನರ್ಗಿಸ್ ತೀರ್ಮಾನಿಸಿದ್ದರು. ಹಾಗೆಯೇ ಅವರು ಹೇಳಿಕೊಂಡಿದ್ದರು ಕೂಡಾ. ಆದರೆ ಉದಯ್ ಚೋಪ್ರಾ, ಪ್ರೇಮ ಪ್ರಸಂಗದಿಂದ ತಮ್ಮ ವೃತ್ತಿಯ ಮೇಲೆ ಯಾವ ಪರಿಣಾಮವೂ ಬೀರಿಲ್ಲ ಎಂಬಂತೆ ಆರಾಮಾಗಿ ಓಡಾಡಿಕೊಂಡಿದ್ದರು. ನರ್ಗಿಸ್ ಕೆಲ ಕಾಲ ದೂರ ಇರಲು ನಿರ್ಧರಿಸಿದರು. ನರ್ಗಿಸ್‌ರನ್ನು ಗಾಢವಾಗಿ ಪ್ರೀತಿಸುವ ಉದಯ್ ಕೂಡ ಅದಕ್ಕೆ ಸಮ್ಮತಿ ಸೂಚಿಸಿದರು. ಇಬ್ಬರ ನಡುವೆ ಮೂಡಿದ್ದು ಬಿರುಕಲ್ಲ, ಅದು ಒಡಂಬಡಿಕೆ ಎನ್ನುವುದು ಅವರನ್ನು ಬಲ್ಲವರ ಮಾತು. ಇಬ್ಬರೂ ರಾಜಿಯಾಗುತ್ತಿರುವುದು ಮಾಧ್ಯಮದ ಮೂಲಕ ಚೋಪ್ರಾ ಕುಟುಂಬದ ಕಿವಿಗೆ ಬಿದ್ದಿದೆ. ಅಭಿಪ್ರಾಯ ಭೇದಗಳನ್ನು ತೊರೆದು ಮತ್ತೆ ಒಂದಾಗಿರುವುದಾಗಿ ಈ ಜೋಡಿ ಘೋಷಣೆ ಮಾಡುವುದೊಂದೇ ಬಾಕಿ. ನರ್ಗಿಸ್ ಮದುವೆಗೆ 'ಯೆಸ್' ಅಂದರೆ ಉದಯ್‌ರನ್ನೂ ಹಸೆಮಣೆ ಮೇಲೆ ಕೂರಿಸಲು ತುದಿಗಾಲಲ್ಲಿ ನಿಂತಿದೆಯಂತೆ.

# ಚುಂಬನಕ್ಕೆ ನಿರ್ಬಂಧವಿಲ್ಲ!





'ಸ್ಟುಡೆಂಡ್ ಆಫ್ ದಿನ ಇಯರ್' ತೆರೆ ಕಂಡ ಬಳಿಕ ಈ ಯುವಕನನ್ನು ಕಂಡು ಮಾರುಹೋದ ಯುವತಿಯರಿಗೆ ಲೆಕ್ಕವಿಲ್ಲ. 'ಮೈ ತೇರಾ ಹೀರೊ' ಬಿಡುಗಡೆಯಾದಾಗ 'ತು ಮೇರಿ ಹೀರೊ' ಎಂದು ಕನಸಿನಲ್ಲಿ ಧವನ್ ಜತೆ ಡ್ಯುಯೆಟ್ ಹಾಡಿದ ಯುವ ಹೃದಯಗಳೂ ಕಡಿಮೆಯಿಲ್ಲ. ಹೊಸ ತಲೆಮಾರಿನ ಮನಸುಗಳ ಎಷ್ಟೋ ಮಂದಿಯ ಕನವರಿಕೆಯಲ್ಲಿ ವರುಣ್ ಪಾಲುದಾರ. ಹಾಗೆಯೇ ಮಾತುಗಾರಿಕೆಯಲ್ಲಿ ಅಪ್ಪ ಡೇವಿಡ್ ಧವನ್ ಅವರಿಗಿಂತಲೂ ಒಂದು ಕೈ ಮೇಲೆಯೇ.

ತಾವು ನಟಿಸಿದ ಚಿತ್ರಗಳ ಸಹ ನಟಿಯರ ಬಗ್ಗೆ ಇಂತಿಪ್ಪ ವರುಣ್, ಮೊನ್ನೆ ಮೊನ್ನೆ ತಮ್ಮನ್ನು ಆರಾಧಿಸುವ ಯುವತಿಯರ ಹೃದಯಗಳಿಗೆ ಕೊಳ್ಳಿ ಇಟ್ಟಿದ್ದಾರೆ! 'ಎನಿಬಡಿ ಕ್ಯಾನ್ ಡ್ಯಾನ್ಸ್'ನ ಎರಡನೇ ಆವೃತ್ತಿಯಲ್ಲಿ ವರುಣ್ ಹಾಗೂ ಶ್ರದ್ಧಾ ಕಪೂರ್ ಒಟ್ಟಿಗೆ ನಟಿಸುತ್ತಿದ್ದಾರೆ. ಚಿತ್ರದಲ್ಲಿ ಇಬ್ಬರ ಕೆಮಿಸ್ಟ್ರಿ ಅತ್ಯದ್ಭುತ ಎಂಬ ಮಾತುಗಳು ಕೇಳಿಬರುತ್ತಿವೆ. 'ಇದಕ್ಕೆ ಕಾರಣವೇನು? ಶ್ರದ್ಧಾ ಮತ್ತು ನಿಮ್ಮ ಜತೆ ಅಂತಹ ವಿಶಿಷ್ಟ ಬಾಂಧವ್ಯ ಇದೆಯೇ?' ಎಂದು ಕೇಳಿದರೆ ವರುಣ್ ನೀಡುವ ಉತ್ತರ ಇದು– 'ನಮ್ಮದು 20 ವರ್ಷಗಳಿಂದ ತಯಾರಾಗುತ್ತಿರುವ ಜೋಡಿ. ಬಾಲ್ಯವನ್ನು ಜತೆಗೆ ಕಳೆದಿದ್ದೇವೆ, ನಮ್ಮೊಳಗಿನ ನೂರಾರು ಸಂಗತಿಗಳನ್ನು ಪರಸ್ಪರ ಹಂಚಿಕೊಂಡಿದ್ದೇವೆ. ಶ್ರದ್ಧಾಳ ಅನುಮತಿ ಇಲ್ಲದೆಯೇ ಆಕೆಗೆ ಚುಂಬಿಸಲೂ ಅವಕಾಶವಿದೆ'.

ಹೀಗೆ ದಿಟ್ಟತನದ ಹೇಳಿಕೆ ಕೊಟ್ಟಿರುವ ಧವನ್, ಶ್ರದ್ಧಾ ಜತೆಗಿನ 20 ವರ್ಷದ ಗೆಳೆತನದಲ್ಲಿ ಎಷ್ಟು ಬಾರಿ ಈ ಅನುಭವ ಪಡೆದುಕೊಂಡಿರಬಹುದು ಎಂದು ಕಲ್ಪಿಸಿಕೊಂಡು ಪಡ್ಡೆ ಹುಡುಗರು ಮೈಬಿಸಿ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಶ್ರದ್ಧಾರ ಪ್ರತಿಕ್ರಿಯೆ ಹೇಗಿರಬಹುದು ಎನ್ನುವುದು ಎಲ್ಲರ ಕುತೂಹಲ. ಆದರೆ ಸದ್ಯ ಉತ್ತರ ನೀಡಲು ಶ್ರದ್ಧಾ ಸುದ್ದಿಮಿತ್ರರ ಕೈಗೆ ಸಿಗುತ್ತಿಲ್ಲ. ಸಿಕ್ಕರೂ ನುಣುಚಿಕೊಳ್ಳುತ್ತಿದ್ದಾರೆ.

ತಮ್ಮ ಜತೆ ನಟಿಸುವ ಎಲ್ಲಾ ನಟಿಯರ ಕುರಿತೂ ವರುಣ್ ಧವನ್ ಆಗಾಗ್ಗೆ ಹೇಳಿಕೆ ನೀಡುತ್ತಿರುತ್ತಾರೆ. 'ಮೈ ತೇರಾ ಹೀರೊ'ದ ನಾಯಕಿ ನರ್ಗಿಸ್ ಫಖ್ರಿ ಜತೆ ಡೇಟಿಂಗ್ ನಡೆಸದೆ ಇದ್ದರೂ ಆಕೆಯನ್ನು ತುಂಬಾ ಗೌರವಿಸುತ್ತೇನೆ ಎಂದಿದ್ದಾರೆ. ಆಕೆಯ ಕುರಿತು ಜನರು ಕೀಳಾಗಿ ಮಾತನಾಡುವುದನ್ನು ಬಯಸುವುದಿಲ್ಲ ಎನ್ನುತ್ತಾರೆ ಅವರು. 'ಸ್ಟುಡೆಂಟ್ ಆಫ್ ದಿ ಇಯರ್'ನ ಜತೆಗಾತಿ ಅಲಿಯಾ ಕುರಿತು ಮಾತನಾಡುವಾಗ ವರುಣ್ ಸಿನಿಮಾದ ಗುಂಗಲ್ಲಿ ವಿಹರಿಸುತ್ತಾರೆ. 'ಸಿನಿಮಾ ಮುಗಿದಿದ್ದು ಹೃದಯವನ್ನು ಒಡೆದಂತಾಗಿದೆ. ಜೀವನ ಈಗ ಅತಿ ಕಷ್ಟವೆನಿಸುತ್ತಿದೆ' ಎಂದು ಚಟಾಕಿ ಹಾರಿಸಿದ್ದಾರೆ. ಎಲ್ಲಾ ನಾಯಕಿಯರ ಬಗ್ಗೆಯೂ ವರುಣ್ ಒಂದಲ್ಲ ಒಂದು ರೀತಿ ಮಾತನಾಡುತ್ತಾರೆ. ಅದು ಪಾಸಿಟಿವ್ ಆಗಿರುತ್ತದೆ ಎನ್ನುವುದು ವಿಶೇಷ. ಮುಂದೆ ಅವರಿಗೆ ನಾಯಕಿಯಾಗುವ ನಟಿಯರನ್ನು ಅದೃಷ್ಟಶಾಲಿಗಳು ಎನ್ನಬಹುದು.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65